

ವೇಲಿಜ್ಕಾ ಉಪ್ಪಿನ ಗಣಿಯ ಮುಂಭಾಗ

## ಉಪ್ಪಿನ ಗಣಿಯ ದೇವತೆ

ಕ್ರಾಕೊವ್‌ನ ರಾಜಕುಮಾರ ಐದನೇ ಬೋಲಸ್ಲಾವ್ ಎನ್ನುವವನಿಗೆ ಯೂರೋಪಿನ ಮತ್ತೊಂದು ದೇಶ, ಹಂಗೇರಿಯ ರಾಜಕುಮಾರಿ ಕಿಂಗಳ ಜೊತೆ ಮದುವೆ ಏರ್ಪಾಡಾಯಿತು. ಅತ್ಯಂತ ಬುದ್ಧಿವಂತಳಾದ ಕಿಂಗ ಮದುವೆಯ ಉಡುಗೊರೆಯಾಗಿ ಆಗಿನ ಕಾಲದಲ್ಲಿ ಬಹಳ ಬೆಲೆಯುಳ್ಳ ಒಂದು ಗಡ್ಡೆಉಪ್ಪನ್ನು ಕೊಡೆಂದು ತನ್ನ ತಂದೆ ನಾಲ್ಕನೇ ಬೇಲಾನನ್ನು ಕೋರುತ್ತಾಳೆ. ಆತ ಹಂಗೇರಿಯ 'ಮರ ಮಾರೋಸ್' ಎನ್ನುವ ಪ್ರಾಂತ್ಯದ ಉಪ್ಪಿನ ಗಣಿಯೊಂದಕ್ಕೆ ಮಗಳನ್ನು ಕರೆದೊಯ್ಯುತ್ತಾನೆ. ಆದರೆ ಇದು ಅತ್ಯಂತ ಪುಟ್ಟ ಗಣಿ. ಅದನ್ನು ಜನರು ಆಳಕ್ಕೆ ಅಗೆದೂ ಇರುವುದಿಲ್ಲ. ಇಲ್ಲಿ ಕಿಂಗ ತನ್ನ ನಿಶ್ಚಿತಾರ್ಥದ ಉಂಗುರವನ್ನು ಕಳಚಿ, ಅದನ್ನು ಗಣಿಯ ಆಳ ಕೊರಕಲೊಂದರಲ್ಲಿ ಬಿಸಾಡಿ ಬಿಡುತ್ತಾಳೆ. ಮದುವೆಯಾಗಿ ಹಂಗೇರಿಯನ್ನು ತೊರೆಯುವ ಮುನ್ನ, ಮಂತ್ರಿಗಳನ್ನ ಕರೆದು ತಾನು ಉಂಗುರ ಎಸೆದ ಕಡೆ ಅಗೆಯಿರೆಂದು ಹೇಳುತ್ತಾಳೆ. ಅವಳು ಹೇಳಿದ ಕಡೆ ಅಗೆಯುತ್ತ ಹೋದಂತೆ ಅಲ್ಲೊಂದು ಉಪ್ಪಿನ ಗಡ್ಡೆ ದೊರೆಯುತ್ತದೆ. ಅದನ್ನು ಒಡೆದಾಗ ಅದರಲ್ಲಿ ಕಿಂಗಳ ಉಂಗುರ ಸಿಗುತ್ತದೆ. ಅಂದಿನಿಂದ ಕಿಂಗ ಹಂಗೇರಿ ಮತ್ತು ಪೋಲೆಂಡ್ ದೇಶಗಳೆರಡರಲ್ಲೂ 'ಉಪ್ಪಿನ ಗಣಿಯ ದೇವತೆ ಮತ್ತು ಸಂರಕ್ಷಕ'ಳೆಂದು ಪ್ರಸಿದ್ಧಳಾಗುತ್ತಾಳೆ. ಈ ಕಥೆಯನ್ನು ಹೇಳುವ ಒಂದಿಡೀ ದೃಶ್ಯವನ್ನು ಗಣಿಯ ವೀಕ್ಷಕ ಹಾದಿಯಲ್ಲಿ ಉಪ್ಪಿನಲ್ಲಿಯೇ ಕೆತ್ತಿ ನಿಲ್ಲಿಸಿದ್ದಾರೆ.



ಔದ್ಯಮಿಕ ಮಟ್ಟದಲ್ಲಿ ಉಪ್ಪನ್ನು ಹೊರಹಾಕಿದ ಈ ಗಣಿ 1996ರಲ್ಲಿ ನಿಧಾನವಾಯ್ತು. ಪ್ರಪಂಚದಲ್ಲಿ ಈ ವೇಳೆಗೆ ಉಪ್ಪಿನ ಬೆಲೆಯೂ ಕಡಿಮೆಯಾಗಿತ್ತು. ಅಲ್ಲಿಂದ ಹಿಡಿದು 2007ರವರೆಗೂ ವೇಲಿಜ್ಕಾ ಗಣಿ ಉಪ್ಪನ್ನು ಹೊರಹಾಕುತ್ತಿತ್ತು. ಆದರೆ ಇದೀಗ ಪ್ರಪಂಚದ ನಾನಾ ಭಾಗಗಳಿಂದ ಪ್ರವಾಸಿಗರನ್ನು ಆಕರ್ಷಿಸುವ ಪ್ರಮುಖ ಉಪ್ಪಿನ ಗಣಿಯಾಗಿ ಮುಂದುವರೆದಿದೆ.

### ಗಣಿಯ ಒಡಲಲ್ಲಿ

ದಿನವೊಂದರಲ್ಲಿ ಟಿಕೆಟ್ ಖರೀದಿಸಿದ ಸಾವಿರಾರು ಜನ ಪ್ರವಾಸಿಗರನ್ನು ಸರದಿ ಗುಂಪಿನಲ್ಲಿ ವೇಲಿಜ್ಕಾ ಗಣಿಯೊಳಗೆ ಬಿಡುತ್ತಾರೆ. ಸಾಧಾರಣ ಕಟ್ಟಡದಂತೆ ಕಾಣುವ ಕಟ್ಟಡವನ್ನು ಪ್ರವೇಶಿಸಿದ ನಂತರ ಮಾರ್ಗದರ್ಶಿಗಳು ನಿಮ್ಮ ಜೊತೆಯಾಗುತ್ತಾರೆ. ಗಣಿಯ ಒಳಗೆ ಥಟ್ಟನೆ ಬೆಳಕು ಮಂದವಾಗಿ, ಸುರುಳಿಯಂತೆ ಕೆಳಗಿಳಿವ 380 ಮರದ ಮೆಟ್ಟಿಲುಗಳನ್ನು ಇಳಿಯಬೇಕಾಗುತ್ತದೆ. ಹಲವೆಡೆ ಬರೀ ಮಣ್ಣಿನ ಮೆಟ್ಟಿಲುಗಳು ಸಿಗುತ್ತವೆ. ಹೆಚ್ಚು ನಡೆಯಲಾಗದವರಿಗೆ, ಆರೋಗ್ಯದ ತೊಂದರೆಯಿರುವವರಿಗೆ ಲಿಫ್ಟ್ ಇದೆಯಾದರೂ ಮಿಕ್ಕ ಪ್ರವಾಸಿಗರು ಮರದ ಮೆಟ್ಟಿಲುಗಳನ್ನು ದಡ ಬಡನೆ ಇಳಿದು 64 ಅಡಿ ಆಳವನ್ನು ತಲುಪುತ್ತಾರೆ. ಇದೀಗ ಎಲ್ಲ ದಿಕ್ಕುಗಳಲ್ಲಿ ಕೊನೆಯೇ ಕಾಣದ ಚಕ್ರವ್ಯೂಹದಂತೆ ಗಣಿಯ ಸುರಂಗಗಳು ಹರಿಯಲು ಶುರುವಾಗುತ್ತವೆ. ಅಲ್ಲಲ್ಲಿ ಜಿನುಗುವ ನೀರು ಆ ವಾತಾವರಣಕ್ಕೆ ಒದ್ದೆಯ ವಾಸನೆಯನ್ನು ನೀಡುವುದರ ಜೊತೆ ನಿಮ್ಮ ಸಂವೇದನಾ ಇಂದ್ರಿಯಗಳನ್ನು ಜಾಗೃತಗೊಳಿಸುತ್ತವೆ. ಅತ್ಯಲ್ಪ ಭಾಗದ ಗಣಿಯ ದರ್ಶನ ಎಂದರೂ ಮೈಲುಗಟ್ಟಲೆ ನಡೆಯಬೇಕಾಗುತ್ತದೆ.

287 ಕಿ.ಮೀ. ಅಗಲಕ್ಕೆ ಹರಡಿ ನಾನಾ ದಿಕ್ಕಿನಲ್ಲಿ ಹರಿವ ಈ ಗಣಿ 327 ಮೀಟರುಗಳಷ್ಟು ಆಳಕ್ಕೆ ಇಳಿಯುತ್ತದೆ. ಅತ್ಯಾಧುನಿಕ ಭಾಗದ ಗಣಿಯನ್ನೇ ಪ್ರವಾಸಿಗರು ನೋಡುತ್ತಾರಾದರೂ ಸಾವಿರಾರು ವರ್ಷಗಳ ಹಿಂದೆ 'ಬಿಳಿ ಚಿನ್ನ'ವೆಂತಲೇ ಹೆಸರು ಪಡೆದ ಉಪ್ಪಿಗಾಗಿ ಮನುಷ್ಯ ನಡೆಸಿದ ಒಂದಿಡೀ ಸಂಗ್ರಾಮದ ಒಳನೋಟವನ್ನು ಈ ಗಣಿ ಪ್ರವಾಸಿಗರಿಗೆ ಮನಗಾಣಿಸುತ್ತ ಸಾಗುತ್ತದೆ. ಪ್ರವಾಸಿಗರು ಒಳಹೊಕ್ಕು ಹೊರಬರುವ ವೇಳೆಗೆ 3.5 ಕಿ.ಮೀ. ನಡೆದಿರುತ್ತಾರೆ. ಆದರೆ ಇದು ಗಣಿಯ 2 ಶೇಕಡ ಹಾದಿ ಮಾತ್ರ. ಇನ್ನುಳಿದ 98 ಶೇಕಡ ಭಾಗಕ್ಕೆ ಪ್ರವಾಸಿಗರಿಗೆ ಪ್ರವೇಶವಿಲ್ಲ. ಇಂತಹ ದೊಡ್ಡ ಮತ್ತು ಪುರಾತನ ಗಣಿಯನ್ನು 1978ರಲ್ಲಿ ಯುನಸ್ಕೋ ಸಂರಕ್ಷಿತ ಪ್ರದೇಶವೆಂದು ಘೋಷಿಸಿತು. ಅಷ್ಟೇ ಅಲ್ಲ, ಯುನೆಸ್ಕೋದ ಅತಿಮುಖ್ಯ 12 ಚಾರಿತ್ರಿಕ ಸ್ಥಳಗಳಲ್ಲಿ ವೇಲಿಜ್ಕಾ ಉಪ್ಪಿನ ಗಣಿಯೂ ಸೇರಿದೆ. ಈ ಗಣಿಯ ದರ್ಶನದಲ್ಲಿ ಸುರಂಗದ ಇಕ್ಕೆಲಗಳಲ್ಲಿ ಹರಳುಗಟ್ಟಿ ಶೇಖರವಾಗಿರುವ ಉಪ್ಪನ್ನು ಉಳಿ ಸುತ್ತಿಗೆಗಳಿಂದ ಕೆತ್ತಿ ಕಲೆಹಾಕಿ, ಸಂಗ್ರಹಿಸಿ, ಪರಿಷ್ಕರಿಸಿ ಅಡುಗೆಮನೆಗಳಿಗೆ ತಲುಪಿಸುವ ಇಡೀ ಕೈಗಾರಿಕೆ ನಿಮ್ಮೆದುರು ಬಿಚ್ಚಿಕೊಳ್ಳುತ್ತದೆ. ನಾನಾ ದಿಕ್ಕಿನಲ್ಲಿ ಹರಡುವ ಸುರಂಗದಲ್ಲಿ ಪ್ರವಾಸಗರು ಕಳೆದುಹೋಗದಂತೆ ನಿಗದಿತ ದಾರಿಯನ್ನು ಮಾಡಲಾಗಿದೆ. ಪ್ರವಾಸಿ ಗೈಡ್‌ಗಳು ಪ್ರತಿ ಇಂತಿಷ್ಟು ದೂರಕ್ಕೂ ಒಬ್ಬೊಬ್ಬರಂತೆ ಬದಲಾಗುತ್ತ ಹೋಗುತ್ತಾರೆ. ಸುರಂಗ ಅಗಲವಾಗುತ್ತ ಹೋದಂತೆಲ್ಲ ಇಕ್ಕೆಲದ ಗೋಡೆಗಳ ಮೇಲೆ ಬೆಳ್ಳನೆ ಹೊಳೆವ ಉಪ್ಪಿನ ಹರಳಿನ ಗುಪ್ಪೆಗಳು,